www.ecourtsindia.com

ಸಿ. ಸಿ. 442/2024 PW-1

ದುರಗಪ್ಪ ತಂದೆ ಮಾನಪ್ಪ

ದಿ.13-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಶ್ರೀ ಕೆ.ಸಿ.ಎಸ್. ವಕೀಲರಿಂದ :-**

ನನ್ನ ಪ್ರಮಾಣೀಕೃತ ಹೇಳಿಕೆಯಾಗಿ ಹಾಜರುಪಡಿಸಿದಂತಹ ಪ್ರಮಾಣ ಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ.

2. ದಾಖಲೆಗಳನ್ನು ಈಗಾಗಲೇ ನಿ.ಪಿ-1 ರಿಂದ 5 ಎಂದು ಗುರುತಿಸಲಾಗಿದ್ದು ಅಂಚೆ ರಸೀದಿಯನ್ನು ನಿ.ಪಿ-6 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿತನ ವಿರುದ್ದ ಸೂಕ್ತ ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು ಶ್ರೀ ಟಿ.ಆರ್ ವಕೀಲರಿಂದ:-**

ನನ್ನ ಮತ್ತು ಆರೋಪಿ ನಡುವೆ ಯಾವುದೇ ಮೂರನೇ ವ್ಯಕ್ತಿ ಇಲ್ಲ ಎಂದರೆ ಸರಿ. ಆರೋಪಿ ಪರವಾಗಿ ಯಾರೂ ಜಾಮೀನು ಮತ್ತು ಭದ್ರತೆಯಾಗಿ ಯಾರೂ ನಿಂತಿಲ್ಲ ಎಂದರೆ ಸರಿ. ಆರೋಪಿತನು ಮುಂದಿನ ದಿನಾಂಕದ ಚೆಕ್ಕನ್ನು ನೀಡಿಲ್ಲ ಎಂದರೆ ಸರಿ. ಆರೋಪಿತನು ನಿ.ಪಿ-2 ಬ್ಯಾಂಕ್ ಹಿಂಬರಹ ಚೆಕ್ ದಿನಾಂಕ 08-04-2023 ರಿಂದ 51 ದಿನಗಳ ನಂತರ ಅಂದರೆ 29-05-2023 ರಂದು ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ನನಗೆ ನ್ಯಾಯಾಲಯ ಶಿಕ್ಷೆ ಮಾಡುತ್ತದೆ ಎನ್ನುವ ಭಯದಿಂದ 51 ದಿನಗಳ ನಂತರ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಬ್ಯಾಂಕ್ ಅಕೌಂಟನಲ್ಲಿ ದುರಗಪ್ಪ ಜಾಲಿಬೆಂಚಿ ಮತ್ತು ಚೆಕ್ಕಿನಲ್ಲಿ ದುರಗಪ್ಪ ಎಮ್.ಯಾದವ್ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಎರಡೂ ಹೆಸರುಗಳಿಂದ ಕರೆಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಸಹಿ/-

ಹೆಚ್ಚುವರಿ ಸಿವಿಲ ನ್ಯಾಯಾಧೀಶರು &
ಜೆಎಂಎಫ್‌ಸಿ ಲಿಂಗಸುಗೂರು.

This is a True Copy of the Court Records Online. Authenticated @ districts.ecourtsindia.com/cnr/KARC310023962024/truecopy/order-1.pdf